**ಕರ್ನಾಟಕ ಸರ್ಕಾರ**

**(ವಾಣಿಜ್ಯ ತೆರಿಗೆಗಳ ಇಲಾಖೆ)**

ವಾತೆಜಂಆ(ಆ)-3/ಡಿ-01, ಸಿ.ಆರ್-15 /2020-21.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ),
ವಿ.ಸ ಮತ್ತು ಸೇ. ತೆ -3, 'ಬಿ' ಬ್ಲಾಕ್, ಟಿ.ಟಿ.ಎಂ.ಸಿ,
2ನೇ ಮಹಡಿ, ಶಾಂತಿನಗರ, ಬೆಂಗಳೂರು,
ದಿನಾಂಕ: 16.07.2021.

## ಕಛೇರಿ ಪ್ರಕಟಣೆ

ವಿಷಯ : ಬಿಎಂಟಿಸಿ, ಟಿಟಿಎಂಸಿ ಬಿ-ಬ್ಲಾಕ್, ಶಾಂತಿನಗರ, ಬೆಂಗಳೂರು ಈ ಕಟ್ಟಡದ 2ನೇ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇಲಾಖಾ ಕಛೇರಿಗಳ ಹೊರಗಿನ ಆವರಣದಲ್ಲಿ ಅಳವಡಿಸಲಾಗಿರುವ ಏರ್‌ಬ್ಲೋಯರ್ ಯಂತ್ರಗಳನ್ನು ಸ್ಥಳಾಂತರಿಸುವ ಕುರಿತು.

ಉಲ್ಲೇಖ :
1. ಮಾನ್ಯ ಆಯುಕ್ತರು, ನಗರ ಭೂ ಸಾರಿಗೆ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ದಿನಾಂಕ:05.05.2020.
2. ಈ ಕಛೇರಿಯ ಸಮ ಪತ್ರ ಸಂಖ್ಯೆ ದಿನಾಂಕ:23.03.2021.
3. ಮಾನ್ಯ ಆಯುಕ್ತರವರ ಪತ್ರದ ಸಂಖ್ಯೆ ಆರ್‌ಎನ್‌ಟಿ/ಸಿಆರ್-03/2011-12 ದಿನಾಂಕ:01.07.2021.

*********

ಬಿಎಂಟಿಸಿ ಕಟ್ಟಡ, ಟಿಟಿಎಂಸಿ ಬಿ-ಬ್ಲಾಕ್, ಶಾಂತಿನಗರ, ಬೆಂಗಳೂರು ಈ ಕಟ್ಟಡದ 2ನೇ ಮಹಡಿಯಲ್ಲಿ ಇಲಾಖಾ ಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದು, ಈ ಕಟ್ಟಡದಲ್ಲಿ ಸಮರ್ಪರ್ಕವಾದ ಶುದ್ಧ ಗಾಳಿಯನ್ನು ನಿರಂತರವಾಗಿ ಪಡೆಯುವ ಸಂಬಂಧ ಕಟ್ಟಡದ ಹೊರಗಿನ ಆವರಣದಲ್ಲಿ ಏರ್‌ಬ್ಲೋಯರ್ ಯಂತ್ರಗಳನ್ನು ಅಳವಡಿಸಲಾಗಿರುತ್ತದೆ. ಸದರಿ ಯಂತ್ರಗಳನ್ನು ಇದೇ ಕಟ್ಟಡದ ಕೊನೆ ಮಹಡಿಯ ಮೇಲ್ಭಾಗದಲ್ಲಿ ಸ್ಥಳಾಂತರಿಸಿದಲ್ಲಿ, ಶಬ್ಧಮಾಲಿನ್ಯದ ಸಮಸ್ಯಯಿಲ್ಲದೇ ನೆಲಮಹಡಿಯಲ್ಲಿರುವ B.T.S ಟರ್ಮಿನಲ್‌ನಲ್ಲಿ ಸಹಸ್ರಾರು ಬಾರಿ ಸಾರಿಗೆ ಬಸ್ಸುಗಳ ಓಡಾಟದ ಕಾರಣ ನಿರಂತರ ವಾಹನಗಳ ಹೊಗೆಯಿಂದಾಗಿ ಯಂತ್ರಗಳ ಫಿಲ್ಟರಗಳಲ್ಲಿ ಹೇರಳವಾಗಿ ಕಾರ್ಬನ್ ಮಸಿ ಸಂಗ್ರಹವಾಗುತ್ತಿದ್ದು, ಶುದ್ಧಗಾಳಿಯನ್ನು ಸಮರ್ಪಕವಾಗಿ ಸದರಿ ಯಂತ್ರಗಳು ನೀಡಲಾಗುತ್ತಿಲ್ಲ. ಈ ವಾಯುಮಾಲಿನ್ಯ ಸಮಸ್ಯೆಯನ್ನು ಸರ್ವರ ಆರೋಗ್ಯದ ಹಿತದೃಷ್ಠಿಯಿಂದ ನಿವಾರಣೆ ಮಾಡಬಹುದಾಗಿದ್ದು, ಸದರಿ ಏರ್‌ಬ್ಲೋಯರ್ ಯಂತ್ರಗಳನ್ನು ಕಟ್ಟಡದ ಮೇಲ್ಭಾಗಕ್ಕೆ ಸ್ಥಳಾಂತರಿಸಲು ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರರವರು ಉಲ್ಲೇಖಿತ(3)ರ ಪತ್ರದಲ್ಲಿ ಅನುಮತಿಯನ್ನು ನೀಡಿರುತ್ತಾರೆ.

ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರವರ ಮೇಲ್ಕಂಡ ಉಲ್ಲೇಖಿತ(3)ರ ಪತ್ರಕ್ಕೆ ಅನುಗುಣವಾಗಿ ಸದರಿ ಏರ್‌ಬ್ಲೋಯರ್ ಯಂತ್ರಗಳನ್ನು ಕಟ್ಟಡದ ಮೇಲ್ಭಾಗಕ್ಕೆ ಸ್ಥಳಾಂತರಿಸಲು ಅರ್ಹ ನೋಂದಾಯಿತ ವ್ಯಾಪಸ್ಥರಿಂದ ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಪ್ರಕಟಣೆ ಹೊರಡಿಸಲಾಗಿರುತ್ತದೆ.

### 1.ಕಾಮಗಾರಿಯ ವಿವರಗಳು

1. *Dismantling of existing air blower systems with accessories, GSS ducts without damaging the units with high safety & using proper tools, tackles, machineries etc.*

2. *Lifting, Shifting, Positioning of air blower units to terrace using existing staircase with skilled manpower & tools tackles.*
3. *Supply, Installation, Testing, Commissioning of factory fabricated TDF ducts with hi-tech supports, flexible canvas connections, Volume control dampers, silicone sealant etc. dampers, silicone sealant etc.*
4. *Re Assembly of units at terrace with high safety with rubber mounts.*
5. *Fabrication of Structural support for plenum & duct system.*

## 2. ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ

1. ಇ–ಪ್ರಕ್ಯೋರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:10.08.2021ರ ಸಂಜೆ 4.30 ಗಂಟೆಗೆ.
2. ತಾಂತ್ರಿಕ ಬಿಡ್‌ನ್ನು ಪರಿಶೀಲಿಸುವ ದಿನಾಂಕ: 11.08.2021ರ ಸಂಜೆ 4.30 ಗಂಟೆಗೆ.
3. ಆರ್ಥಿಕ ಬಿಡ್ಡಿನ ಲಕೋಟೆಯನ್ನು ತೆರೆಯುವ ದಿನಾಂಕ:12.08.2021ರ ಸಂಜೆ 4.30 ಗಂಟೆಗೆ.

## 3. ನಿಬಂಧನೆಗಳು

1. ಅರ್ಹ ನೋಂದಾಯಿತ ವ್ಯಾಪಾರಸ್ಥರು ರೂ.60,000/– ಮೊಬಲಗನ್ನು ಇಎಂಡಿಯಾಗಿ ಠೇವಣಿ ಇಡತಕ್ಕದ್ದು.
2. ಇಲಾಖಾ ಕಛೇರಿಗಳ ಎರಡನೇ ಮಹಡಿಯಲ್ಲಿ ಅಳವಡಿಸಲಾಗಿರುವ ಏರ್‌ಬ್ಲೋಯರ್ ಯಂತ್ರಗಳನ್ನು ಇದೇ ಕಟ್ಟಡದ ಕೊನೆ ಮಹಡಿಯ ಮೇಲ್ಭಾಗದಲ್ಲಿ ಸ್ಥಳಾಂತರಿಸುವ ಗುತ್ತಿಗೆದಾರರು ಕಾಮಗಾರಿಯ ಬಗ್ಗೆ ನೈಪುಣ್ಯತೆಯನ್ನು ಹೊಂದಿರಬೇಕು.
3. ಸದರಿ ಏರ್‌ಬ್ಲೋಯರ್ ಯಂತ್ರಗಳನ್ನು ಸ್ಥಳಾಂತರಿಸುವ ಸಂದರ್ಭದಲ್ಲಿ ಯಂತ್ರಗಳಿಗೆ ಯಾವುದೇ ರೀತಿಯ ಹಾನಿಯುಂಟಾದಲ್ಲಿ ಗುತ್ತಿಗೆದಾರರೆ ಜವಾಬ್ದಾರರು.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿ. ಸ. ಮತ್ತು ಸೇ. ತೆ. ಕಛೇರಿ–3, ಶಾಂತಿನಗರ, ಬೆಂಗಳೂರು.